ಇ) ಉಚ್ಚ ನ್ಯಾಯಾಲಯದಿಂದ ಕೆಲವು ಬಾಕಿದಾರರ ತಡೆ ಆಜ್ಞೆ ತಂದಿರುವುದರಿಂದ ಅವರುಗಳಿಂದ ಬಾಕಿ ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲ. ಮತ್ತು ಇತರ ಬಾಕಿದಾರರಿಂದ ವಸೂಲು ಮಾಡಲು ನಿರ್ಬಳರ ಭೂ ಸ್ವಾಧೀನ ಕ್ರಮದ ರೀತಿ ಕ್ರಮ ಕೈಗೊಳ್ಳಲಾಗುತ್ತದೆ.

ವಿದ್ಯುಚ್ಛಕ್ತಿ ಇಲಾಖೆಯ ಮಳಿಗೆ ಬಗ್ಗೆ

೫೪೮. ಶ್ರೀ ಚಂದ್ರಶೇಖರ ಮಾವಿನಿ (ಪರಸಗಡ).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಗಣಿ ಹಾಗೂ ಭೂ ವಿಜ್ಞಾನ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇಡೀ ರಾಜ್ಯಕ್ಕೆ ಒಂದೇ ಒಂದು ಮಳಿಗೆ ಬೆಂಗಳೂರು ನಗರದಲ್ಲಿ ಇದ್ದು ಎಲ್ಲ ಜಿಲ್ಲೆಯವರು ಅವಶ್ಯಕ ವಿದ್ಯುತ್ ಸಾಮಗ್ರಿಗಳನ್ನು ಇಲ್ಲಿಂದಲೇ ಒಯ್ಯಬೇಕಾಗಿ ದೂರದ ಹೈದರಾಬಾದ್, ಕರ್ನಾಟಕ ಉತ್ತರ ಕರ್ನಾಟಕದವರಿಗೆ ಬಹಳಷ್ಟು ತೊಂದರೆಯಾದ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಅನುಕೂಲವಾಗಲು ಹುಬ್ಬಳ್ಳಿಯಲ್ಲಿ ಒಂದು ವಿದ್ಯುತ್ ಸಾಮಗ್ರಿಗಳ ಮಳಿಗೆಯನ್ನು ತೆರೆಯಲಾಗುವುದೇ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಬೆಂಗಳೂರಿನ ಕೇಂದ್ರೀಯ ಮಳಿಗೆಯಿಂದಲೇ ಎಲ್ಲಾ ಸಾಮಗ್ರಿಗಳನ್ನು ಎಲ್ಲಾ ಜಿಲ್ಲೆಗಳಿಗೂ ಸರಬರಾಜು ಮಾಡುವ ಸಂಗತಿ ಇಲ್ಲ. ಬೆಂಗಳೂರಿನ ಕೇಂದ್ರೀಯ ಮಳಿಗೆಯ ಜೊತೆಗೆ ೬ ಪ್ರಾದೇಶಿಕ ಮಳಿಗೆಗಳೂ, ೩೩ ವಿಭಾಗೀಯ ಮಳಿಗೆಗಳಿವೆ. ಸರಕು ತರಿಸಿಕೊಳ್ಳಲು ಕೋರಿಕೆ ಮಾಡಿದಲ್ಲಿ ನೇರವಾಗಿ ಸಾಮಗ್ರಿಗಳನ್ನು ತಯಾರಕರ ಉತ್ಪಾದನಾ ಕೇಂದ್ರಗಳಿಂದಲೇ ಸಾಮಾನುಗಳನ್ನು ಸರಬರಾಜು ಮಾಡುವ ವ್ಯವಸ್ಥೆ ಇದೆ. ವಿಭಾಗೀಯ ಮಳಿಗೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಪ್ರಾದೇಶಿಕ ಮಳಿಗೆಯ ಅಧಿಕಾರಿಗಳಿಂದ ಸಾಮಾನುಗಳನ್ನು ಕೋರಿಕೆ ಮೂಲಕ ತರಿಸಿಕೊಳ್ಳಬಹುದು. ಅಪೂರ್ವ ಸಂದರ್ಭಗಳಲ್ಲಿ ಪ್ರಾದೇಶಿಕ ಮಳಿಗೆಗಳಿಂದ ಸಾಮಾನುಗಳು ದೊರೆಯದಿದ್ದಾಗ ಮಾತ್ರ ಕೇಂದ್ರೀಯ ಮಳಿಗೆಯಾದ ಬೆಂಗಳೂರಿನಿಂದ ಪಡೆಯಬೇಕಾಗಿದೆ.

ಆ) ಹುಬ್ಬಳ್ಳಿಯಲ್ಲಿ ಹಾಲಿ ಒಂದು ಪ್ರಾದೇಶಿಕ ಮಳಿಗೆ ಇದ್ದು, ಅದು ಆ ವೃತ್ತದ ಅವಶ್ಯಕತೆಯನ್ನು ಪೂರೈಸುತ್ತಿದೆ. ಹುಬ್ಬಳ್ಳಿಯಲ್ಲಿ ಕೇಂದ್ರೀಯ ಮಳಿಗೆ ತೆರೆಯುವ ವಿಷಯ ಮಂಡಳಿಯು ಪರಿಶೀಲಿಸುತ್ತಿದೆ. ಮತ್ತು ಶೀಘ್ರವಾಗಿ ತೀರ್ಮಾನಿಸುತ್ತದೆ.

ಹುಲ್ಲಿನ ಬ್ಯಾಂಕುಗಳನ್ನು ಸ್ಥಾಪಿಸುವ ಬಗ್ಗೆ

೫೫೦. ಶ್ರೀ ಆರ್. ವೆಂಕಟರಾಮಯ್ಯ (ಮಂಚಿಬಾಗಿಲು).—ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಾದ್ಯಂತ ಭೀಕರವಾದ ಕ್ಷಾಮ ಪರಿಸ್ಥಿತಿಯಿಂದಾಗಿ ಜಾನುವಾರುಗಳಿಗೆ ಮೇವಿಲ್ಲದೆ ಸತ್ತು ಬೀಳುತ್ತಿರುವ ಪರಿಸ್ಥಿತಿಯಲ್ಲಿ ಈ ಜಾನುವಾರು ಸಂಪತ್ತನ್ನು ರಕ್ಷಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಅದಕ್ಕೆ ತಗುಲಿದ ವೆಚ್ಚವೆಷ್ಟು ?

ಆ) ಎಷ್ಟು ತಾಲ್ಲೂಕುಗಳಲ್ಲಿ ಹುಲ್ಲಿನ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ ?

ಇ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ಗೋಶಾಲೆಗಳನ್ನು ಸ್ಥಾಪಿಸಲಾಗಿದೆ ಮತ್ತು ಗೋಶಾಲೆಗಳಲ್ಲಿರುವ ಗೋವುಗಳ ಸಂಖ್ಯೆ ಎಷ್ಟು ?

ಈ) ಗೋಸಂಪತ್ತನ್ನು ರಕ್ಷಿಸಲು ಯುದ್ಧೋತ್ತರಾದಿಯ ಕ್ರಮಗಳನ್ನು ತೆಗೆದುಕೊಳ್ಳುವ ಯೋಜನೆ ಸರಕಾರಕ್ಕಿದೆಯೆ ?

ಉ) ಹಾಗಿದ್ದಲ್ಲಿ, ಅದರ ವಿವರಗಳೆಷ್ಟು ?

ಶ್ರೀ ಎಸ್.ಆರ್. ಬೊ ್ಮಾಯಿ (ಕಂದಾಯ ಸಚಿವರು).—

ಅ) ರಾಜ್ಯದ ಅಭಾವಕ್ಕೆ ಜಾನುವಾರುಗಳು ತುತ್ತಾಗಿವೆ. ಆದರೆ ಮೇವು ಇಲ್ಲದೆ ಜಾನುವಾರುಗಳು ಸತ್ತಿರುವುದಿಲ್ಲ.

ಆ) ಜಾನುವಾರುಗಳ ಸಂಪತ್ತನ್ನು ರಕ್ಷಿಸಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಂಡಿದೆ.

೧ ಗೋಶಾಲೆಗಳನ್ನು ತೆರೆಯುವುದು

೨ ಅರಣ್ಯದ ಹುಲ್ಲನ್ನು ಕಶ್ತರಿಸಿ ಸಾಗಾಣಿಕೆ ಮತ್ತು ಒದಗಿಸುವುದು.

೩ ಹೊರ ರಾಜ್ಯಗಳಾದ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶಗಳಿಂದ ಗೋಧಿ ಹುಲ್ಲು ಮತ್ತು ಅಕ್ಕಿ ತವಡು ತರಿಸಿ ವಿತರಣೆ ಮಾಡುವುದು.

೪ ತಾಲ್ಲೂಕು ಕೇಂದ್ರಗಳಲ್ಲಿ ಮೇವು ಕೇಂದ್ರಗಳನ್ನು ತೆರೆದು ಅವುಗಳ ಮೂಲಕ ಮೇವು ಸಾಗಾಣಿಕೆ ಮತ್ತು ವಿತರಣೆ ಮಾಡುವುದು.

೫ ಖಾಸಗಿಯವರಿಗೆ ರಿಯಾಯಿತಿ ದರದಲ್ಲಿ ಒಂದು ಲಾರಿಗೆ ಒಂದು ದಿವಸಕ್ಕೆ ೨೫೦ ರೂಪಾಯಿಗಳನ್ನು ಕೊಡಲು (ಎಣ್ಣೆ ಖರ್ಚು ಬೇರೆ) ಅನುಮತಿ ನೀಡಲಾಗಿದೆ.

೬ ದೊಡ್ಡ ಮತ್ತು ಮಧ್ಯಮ ನೀರಾವರಿ ಜಲಾಶಯಗಳಿಂದ ನೀರನ್ನು ಪಡೆದು ಮೇವು ಬೆಳೆಯಲು ಪ್ರೋತ್ಸಾಹ ನೀಡಲಾಗುತ್ತಿದೆ.

೭ ಕಬ್ಬಿನ ಸಿಪ್ಪೆಯಿಂದ ದನಗಳ ಮೇವಿಗಾಗಿ ಸಕ್ಕರೆ ಕಾರ್ಖಾನೆಗಳ ಮೂಲಕ ತಯಾರು ಮಾಡುವುದು.

೮ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಫಾರಂಗಳಲ್ಲಿ ಮೇವು ಬೆಳೆಯುವ ಕಾರ್ಯಕ್ರಮ ನಡೆಸುವುದು.

೯ ಸಹಕಾರ ಸಂಘಗಳ ಮತ್ತು ಸರ್ಕಾರದಿಂದ ನೀರಾವರಿ ರೈತರಿಗೆ ಮೇವು ಬೆಳೆಯಲು ಸಾಲ ನೀಡುವುದು.

೧೦ ಪಶು ವೈದ್ಯಕೀಯ ಯೋಜನೆಯಲ್ಲಿ ಪುಷ್ಟಿ ಆಹಾರ ಒದಗಿಸುವುದು.

(ವಿವಿಧ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಿದ ಹಣ ಮತ್ತು ಖರ್ಚಿನ ಪಟ್ಟಿಯನ್ನು ಲಗತ್ತಿಸಿದೆ)

STATEMENT SHOWING THE MEASURES TAKEN BY GOVERNMENT TO PROTECT CATTLE WEALTH, AMOUNT RELEASED & EXPENDITURE INCURRED UNDER EACH OF THE MEASURES

Sl. No.	Programme	Amount released	Expenditure incvrred an at end of 31-12-85	Remarks if any
1	2	3	4	5
1	Opening of Goshalas Cattle camps	100.00	7,15	Amount released at the rate of 2 lakhs for each camp for 50 camps.
2	Cutting from pertatiou and Supply of Forest gran	20.00	1.60	
3	Procurement and supply fodder town Northern states of Punjab, Haryan and U. P.	55.00	...	1st batch of consignment of fodder has been received from Punjab, expenditure incurred on this is still awaited from the Director of Animal Husbandary & Veternary Services.
4	Opening of fodder banks of Taluk head quarters and transportation and supply	95.00	44.15	
5	Cultivation of Fodder in State forms	50.00	28.87	
6	Loan for fodder cultivation to defaulters of Co-operative dues.	70,00	...	Amount released during December 85.
7	Supply of enriched feed to cattle under veternary care programme.	100.00	100.00	
		490.00	181.77	

ಆ) ೯೩ ತಾಲ್ಲೂಕುಗಳಲ್ಲಿ ಹುಲ್ಲಿನ ಬ್ಯಾಂಕಂಗಳನ್ನು ತೆರೆಯಲಾಗಿದೆ.

ಇ) ರಾಜ್ಯದಲ್ಲಿ ಅಭಾವ ಪೀಡಿತ ಪ್ರದೇಶಗಳಲ್ಲಿನ ಜಾನುವಾರುಗಳ ಸಂಖ್ಯೆ ೧,೪೨,೬೬,೪೯೧ ಗಳಿದು ೬೪ ಗೋಶಾಲೆಗಳನ್ನು ಸ್ಥಾಪಿಸಲಾಗಿದ್ದು ೨೧,೨೩೬ ಜಾನುವಾರುಗಳನ್ನು ಸಾಕಲಾಗುತ್ತಿದೆ.

ಈ) ಹೌದು.

ಉ) ಅ,ಆ ಮತ್ತು ಇ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲಿ ಈ ವಿವರಗಳನ್ನು ಕೊಡಲಾಗಿದೆ.

ಮೈಸೂರು ಜನತಾ ಬಜಾರ್

೬೧೬. ಶ್ರೀಮತಿ ಮುಂಕ್ತಾರುನ್ನಿಸಾ (ನರಸಿಂಹರಾಜ).— ಮಾನ್ಯ ಸಹಕಾರ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜನತಾ ಬಜಾರ ಲಾಭದಲ್ಲಿ ನಡೆಯುತ್ತಿದೆಯೇ ?

ಆ) ಸರ್ಕಾರವು ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘಕ್ಕೆ ಚುನಾವಣೆ ನಡೆಸುವ ಬಗ್ಗೆ ಯೋಚಿಸಿದೆಯೆ ?

ಇ) ಹಾಗಿದ್ದಲ್ಲಿ ಯಾವಾಗ ಚುನಾವಣೆಯನು ನಡೆಯುವುದು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಅ) ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ (ಮೈಜಿಕೆ ಸಮಾಸ)ವು ಮೈಸೂರು ನಗರದಲ್ಲಿ ಎರಡು ಜನತಾ ಬಜಾರುಗಳನ್ನು ನಡೆಸುತ್ತಿದೆ. ಈ ಎರಡು ಜನತಾ ಬಜಾರುಗಳು ಕೂಡಿಬಿದ್ದ ಹಾನಿಯನ್ನು ಹೊಂದಿವೆ.

ಆ) ಮತ್ತು ಇ) ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ(ಮೈಜಿಕೆಸಮಾಸ)ದ ವ್ಯವಹಾರಗಳನ್ನು ನಡೆಸಲು ದಿನಾಂಕ ೩೦-೧೦-೧೯೮೫ ರಿಂದ ಪರಿಣಾಮಿಸಂತೆ ಎರಡು ವರ್ಷಗಳವರೆಗೆ ವಿಶೇಷಾಧಿಕಾರಿಯನ್ನು ಸರ್ಕಾರವು ನೇಮಿಸಿದೆ. ಸಂಘದ ಕಾರ್ಯ ಚಟುವಟಿಕೆ ಉತ್ತಮಗೊಂಡ ನಂತರ ಸರ್ಕಾರವು ಸಂಘದ ಚುನಾವಣೆ ನಡೆಸುವ ಬಗ್ಗೆ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಪಟ್ಟಿಯನ್ನು ಮಂಡಿಸಲಾಯಿತು.

ವಿಫಲ ಬಾವಿ ಯೋಜನೆ ಬಗ್ಗೆ.

೬೪೭. ಶ್ರೀ ಶಿವಸಂಗಪ್ಪ ಕಡಪಟ್ಟಿ(ಹುನಗುಂದ).—ಮಾನ್ಯ ಸಹಕಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂ ಅಭಿವೃದ್ಧಿ ಬ್ಯಾಂಕಿನವರು ಕೊಳವೆ ಬಾವಿಗಳಿಗೆ ಸಾಲ ಕೊಡುವಾಗ ಭೂಗರ್ಭ ಇಲಾಖೆಯವರಿಂದ ಉತ್ಪಾದನಾ ಪರೀಕ್ಷೆ ಪ್ರಮಾಣ ಪತ್ರ ಕೇಳುವರು. ಸರ್ಕಾರದಿಂದ ಮನ್ನಣೆ ಪಡೆದ ಕಂಪನಿಯಿಂದಾ ಕೊಳವೆ ಬಾವಿ ಹಾಕಿಸಿದರೂ ಉತ್ಪಾದನೆ ಪರೀಕ್ಷೆ ಬಗ್ಗೆ ಕೇಳುವುದು ನಿಜವೇ,

ಆ) ಉತ್ಪಾದನಾ ಪರೀಕ್ಷೆ ಅವಶ್ಯಕತೆ ಇದ್ದಲ್ಲಿ ಭೂಗರ್ಭ ಇಲಾಖೆಯ ಸಿಬ್ಬಂದಿಗೆ ವಿಭಾಗ ಅಧಿಕಾರಿಗಳಿಗೆ ಅಧಿಕಾರ ಕೊಡುವ ಬದಲು ಜಿಲ್ಲೆಯ ಭೂ ಗರ್ಭ ಇಲಾಖೆಯ ಅಧಿಕಾರಿಗಳಿಗೆ ಸಾಮಗ್ರಿ ಕೊಟ್ಟು ಅಧಿಕಾರ ಕೊಟ್ಟಲ್ಲಿ ರೈತರಿಗೆ ಅನುಕೂಲವಾಗುವುದಿಲ್ಲವೇ ?